ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿಕಟ್ಟಡ, ಬೆಂಗಳೂರು-1.
ದೂ. 080-22372738e-mail: nrega@karnataka.gov.in

ಆರ್‌ಡಿಸಿ-ಇಜಿಎಸ್/194/2021 ದಿನಾಂಕ: 12-10-2021

ಇವರಿಗೆ,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ **"ಪವಿತ್ರ ವನ"** ಅಭಿವೃದ್ಧಿ ಪಡಿಸುವ ಕುರಿತು.

~~~~~~~

Issued
Date 26/10/2021
Signature

## I.ಪರಿಕಲ್ಪನೆ:

ಭಾರತ ದೇಶವು ಜೀವವೈವಿಧ್ಯತೆಯ ತಾಣವಾಗಿದ್ದು, ಅನಾದಿಕಾಲದಿಂದಲೂ ಪ್ರಕೃತಿ ಆರಾಧನೆಯನ್ನು ಗ್ರಂಥ, ಪುರಾಣಗಳು ಮತ್ತು ರಾಜಮನೆತನಗಳಲ್ಲಿ ಕಾಣಬಹುದು. ಪ್ರಕೃತಿ ಆರಾಧನೆಯು ಅನೇಕ ಸಮುದಾಯಗಳ ಜೀವನಾಡಿಯಾಗಿದ್ದು, ಅದರಲ್ಲೂ ವಿಶೇಷವಾಗಿ ಗಿಡ ಮರಗಳನ್ನು ದೈವೀ ಭಾವದಿಂದ ಆರಾಧಿಸುತ್ತಾರೆ. ಪ್ರಸ್ತುತ ಜಾಗತೀಕರಣ ಮತ್ತು ಜನಸಂಖ್ಯಾ ಸ್ಫೋಟದಿಂದಾಗಿ ಜೀವವೈವಿಧ್ಯತೆಯ ತಾಣವಾದ ವನಗಳು ಕಣ್ಮರೆಯಾಗುತ್ತಿವೆ. ಇದರಿಂದಾಗಿ ಪ್ರಕೃತಿಯೊಂದಿಗಿನ ಮಾನವನ ನಿಕಟ ಸಂಬಂಧವು ನಶಿಸಿ ಹೋಗುತ್ತಿದೆ.ತತ್ಪರಿಣಾಮವಾಗಿ ಭೂಮಿಯ ಉಷ್ಣಾಂಶದಲ್ಲಿ ವ್ಯತ್ಯಾಸ, ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ, ವಾತಾವರಣದಲ್ಲಿ ಅಸಮತೋಲನ ಮತ್ತು ನೈಸರ್ಗಿಕ ವಿಕೋಪಗಳು ಸಂಭವಿಸುತ್ತಿರುವುದನ್ನು ಗಮನಿಸಬಹುದಾಗಿದೆ.ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರಕೃತಿ ಮತ್ತು ಮಾನವನ ಸಂಬಂಧಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಕಿರು ವನಗಳನ್ನು ನಿರ್ಮಿಸುವುದು ಅವಶ್ಯಕವಾಗಿದೆ. ಈ ಅಂಶದೊಂದಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಊರಿಗೊಂದು ವನ ಘೋಷಣೆಯೊಂದಿಗೆ **ಪವಿತ್ರ ವನ** ವನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ.

## II. ಉದ್ದೇಶಗಳು

1. ಪ್ರತಿ ಹಳ್ಳಿಗಳಲ್ಲಿ ಜೀವವೈವಿಧ್ಯತೆ ಸಂರಕ್ಷಣೆಯೊಂದಿಗೆ ಪರಿಸರದ ರಕ್ಷಣೆ ಬಗ್ಗೆ ಸಾಕ್ಷರತೆ ಮೂಡಿಸುವುದು.
2. ಜಲ ಮರುಪೂರಣ ಮತ್ತು ಭೂ ಜಲ ಸಂಪನ್ಮೂಲಗಳ ಸಂರಕ್ಷಣೆಗೆ ನೆರವಾಗುವುದು.
~~~~~~~

3. ಸಾಂಪ್ರದಾಯಿಕ ಆಯುರ್ವೇದ ಮತ್ತು ನಾಟಿವೈದ್ಯಪದ್ಧತಿಗೆ ಪೂರಕ ಪರಿಸರ ಸೃಷ್ಠಿಸುವುದು.
4. ಕಿರು ಅರಣ್ಯ ಉತ್ಪನಗಳ ಆಗರ ಸೃಷ್ಠಿಸುವುದು.
5. ನಾಗರೀಕರು ಮತ್ತು ಮಕ್ಕಳಿಗೆ ವಿವಿಧ ಔಷದಿ ತಳಿಗಳ ಬಗ್ಗೆ ಪರಿಚಯ ನೀಡುವುದು.

**III.ಸಾಂಪ್ರದಾಯಿಕ ಪವಿತ್ರವನಗಳ ಉಪಯೋಗಗಳು:**

1. ಅನುಪಯುಕ್ತ ಭೂ ಪ್ರದೇಶದ ಪರಿಣಾಮಕಾರಿ ಮರುಬಳಕೆ.
2. ಗ್ರಾಮೀಣ ಪ್ರದೇಶದ ಜನರ ಜೀವನೋಪಾಯಕ್ಕೆ ಅನುವು ಮಾಡಿದಂತಾಗುವುದು.
3. ಸಸ್ಯವರ್ಗದ ಹೊದಿಕೆಯಿಂದ ಮಣ್ಣಿನ ಸವೆತವನ್ನು ಕಡಿಮೆಗೊಳಿಸಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಬಹುದು.
4. ಅರಣ್ಯ ಪ್ರದೇಶದ ವಿಸ್ತರಣೆಯಿಂದ ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳಬಹುದು.
5. ಅಳಿವಿನಂಚಿನಲ್ಲಿರುವ ಅಪರೂಪದ ಸಸ್ಯ ಪ್ರಭೇದಗಳು, ಔಷಧಿ ಗಿಡಗಳು ಮತ್ತು ಸ್ಥಳೀಯ ವಿವಿಧ ಜಾತಿಯ ಮರಗಳನ್ನು ಕಾಪಾಡಲು ನೆರವಾಗುವುದು.
6. ಪ್ರಕೃತಿಯ ಜೀವ ಸಂಕುಲಗಳ ಸಂರಕ್ಷಣೆ.
7. ವನ ನಿರ್ಮಾಣ ಮತ್ತು ನಿರ್ವಹಣೆಯಿಂದ ಸ್ಥಳೀಯ ಜನರಿಗೆ ಉದ್ಯೋಗ ಸೃಜಿಸಿದಂತಾಗುವುದು.
8. ಸಾಂಪ್ರದಾಯಿಕ ಗಿಡಮೂಲಿಕೆಗಳ ಔಷಧಿ ಹಾಗೂ ನಾಟಿ ವೈದ್ಯ ಪದ್ಧತಿಗೆ ಪುಷ್ಠಿ ನೀಡಿದಂತಾಗುವುದು.
9. ನಾಗರೀಕರು ಮತ್ತು ಮಕ್ಕಳಿಗೆ ವಿವಿಧ ಜಾತಿಯ ಗಿಡ ಮರಗಳು ಮತ್ತು ಅದರ ಉಪಯೋಗಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರಕುವುದು.
10. ಕಿರು ಅರಣ್ಯ ಉತ್ಪನ್ನಗಳಾದ ಹಣ್ಣು, ಜೇನು ಇತ್ಯಾದಿಗಳನ್ನು ಉಪಯೋಗಿಸಿಕೊಳ್ಳಬಹುದು.
11. ಮುಂದಿನ ಪೀಳಿಗೆಗೆ ಪವಿತ್ರವನವನ್ನು ಬಳುವಳಿಯನ್ನಾಗಿ ನೀಡಿದಂತಾಗುವುದು.

**IV. ವನಗಳ ವಿಧಗಳು:**

ಭಾರತೀಯ ಸಂಸ್ಕೃತಿಯಲ್ಲಿ ಧಾರ್ಮಿಕ ಆಚರಣೆ ಹಾಗೂ ಸಮುದಾಯಗಳ ನಂಬಿಕೆಗೆ ಅನುಸಾರವಾಗಿ ವಿವಿಧ ತರಹದ ವನಗಳನ್ನು ಕಾಣಬಹುದು. ಅದರಲ್ಲೂ ವಿಶೇಷವಾಗಿ ನಕ್ಷತ್ರವನ, ನವಗ್ರಹವನ ಮತ್ತು ರಾಶಿವನಗಳಲ್ಲಿ ವಿವಿಧ ದಿಕ್ಕುಗಳಲ್ಲಿ ಮತ್ತು ಆಕಾರಗಳಲ್ಲಿ ಗಿಡಗಳನ್ನು ನಾಟಿ ಮಾಡುವುದು ವಿಶಿಷ್ಠವಾಗಿದೆ. ಪೂಜಾ/ಪವಿತ್ರ ವನಗಳಲ್ಲಿ ಉಪಯೋಗಿಸುವಂತ ವಿವಿಧ ಗಿಡಗಳನ್ನು ಅನುಬಂಧಗಳಲ್ಲಿ ನೀಡಿದೆ.

**V. ಜಿಲ್ಲಾ ಮಟ್ಟದ ಹಸಿರು ಸಮಿತಿ:**

ಈಗಾಗಲೇ ಪ್ರತಿ ಜಿಲ್ಲೆಯಲ್ಲಿರುವ ಜಿಲ್ಲಾ ಮಟ್ಟದಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿದ'ಹಸಿರು ಕರ್ನಾಟಕ ಸಮಿತಿ' ಯವರೇ ಸದರಿ ಯೋಜನೆಯ ಮೇಲ್ವಿಚಾರಣೆ ಮಾಡಬೇಕು.

| | | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು | ಸಹ ಅಧ್ಯಕ್ಷರು |
| 3 | ಕೃಷಿ, ಜಲಾನಯನ, ಪಶುಸಂಗೋಪನೆ, ತೋಟಗಾರಿಕೆ ಮೀನುಗಾರಿಕೆ, ರೇಷ್ಮೆ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು | ಸದಸ್ಯರು |
| 4 | ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ) | ಸದಸ್ಯರು |
| 5 | ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು | ಸದಸ್ಯರು |
| 6 | ಸಾಮಾಜಿಕ ಅರಣ್ಯ ವಿಭಾಗದ ಉಪ ಸಂರಕ್ಷಣಾಧಿಕಾರಿ | ಸದಸ್ಯರು |

| | | |
|---|---|---|
| 7 | ಜಿಲ್ಲೆಯ ಕಂದಾಯ ಉಪ ವಿಭಾಗಗಳ ಸಹಾಯಕ ಆಯುಕ್ತರು | ಸದಸ್ಯರು |
| 8 | ಯುವಜನ ಸೇವಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ | ಸದಸ್ಯರು |
| 9 | ಜಲ ಸಂರಕ್ಷಣೆ ಮತ್ತು ಭೂ ಸಂರಕ್ಷಣೆ ಕೆಲಸಗಳನ್ನು ನಿರ್ವಹಿಸಿದ ಪ್ರತಿಷ್ಠಿತ ವ್ಯಕ್ತಿಗಳು/ಪರಿಣಿತರು ಸಂಘ ಸಂಸ್ಥೆಗಳ ಪ್ರತಿನಿಧಿಗಳು (ಒಟ್ಟು 3 ರಿಂದ 4) (ಜಿಲ್ಲಾ ಸಮಿತಿಯಿಂದ ನಾಮ ನಿರ್ದೇಶನ ಮಾಡತಕ್ಕದ್ದು.) | ಸದಸ್ಯರು |
| 10 | ಉಪ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ) | ಸದಸ್ಯ ಕಾರ್ಯದರ್ಶಿ |

## VI. ಗ್ರಾಮ ಪಂಚಾಯತಿಯ ಪಾತ್ರ:

ಪವಿತ್ರವನದ ಅನುಷ್ಠಾನ, ಸಂರಕ್ಷಣೆಯನ್ನು ಹಾಗೂ ನಿರ್ವಹಣೆ ಮಾಡುವುದು ಗ್ರಾಮ ಪಂಚಾಯತಿಯ ಜವಾಬ್ದಾರಿಯಾಗಿರುತ್ತದೆ.

## VII. ಅನುಷ್ಠಾನ ವಿಧಾನ:

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಸೂಚಿ–1 ಪ್ಯಾರಾ–4 ರ ಪ್ರವರ್ಗ– ಎ ರಲ್ಲಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅರಣ್ಯೀಕರಣ, ನೆಡುತೋಪುಗಳು, ಅರಣ್ಯ ಮತ್ತು ಸಾರ್ವಜನಿಕ ಜಮೀನುಗಳಲ್ಲಿ ಗಿಡ ನೆಡುವಿಕೆ, ಭೂ ಅಭಿವೃದ್ಧಿ ಕಾಮಗಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಆಧುನಿಕತೆ, ನಗರೀಕರಣ ಮತ್ತು ಜಾಗತೀಕರಣದಿಂದಾಗಿ ಕಾಲಕ್ರಮೇಣದಲ್ಲಿ ಕಾಣೆಯಾಗುತ್ತಿರುವ ಪವಿತ್ರ ಮರ ಗಿಡಗಳನ್ನು ಒಳಗೊಂಡಂತೆ ಒಂದು ಪವಿತ್ರ ವನ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಚಟುವಟಿಕೆಗಳನ್ನು ಅಳವಡಿಸಿಕೊಂಡು ಕ್ರಮವಹಿಸುವುದು.

a) ಅನುಬಂಧದಲ್ಲಿ ಸೂಚಿಸಿರುವಂತೆಪವಿತ್ರ ವನದಲ್ಲಿ ಗಿಡಮರಗಳನ್ನು ವಿವಿಧ ಆಕೃತಿಯಲ್ಲಿ ನಾಟಿ ತೆಗೆದುಕೊಳ್ಳುವುದು.

b) ಪ್ರತಿಯೊಂದು ಮರ/ಗಿಡದ ಮಹತ್ವ ಹಾಗೂ ಉಪಯೋಗಗಳ ಕುರಿತು ಫಲಕಗಳನ್ನು ಅಳವಡಿಸುವುದು.

c) ವನದಲ್ಲಿಯ ಜೈವಿಕ ವೈವಿಧ್ಯತೆ ಮಹತ್ವದ ಕುರಿತು ಶಾಲಾ ಮಕ್ಕಳ ಪಾಠಕ್ಕೆ ಅನುಕೂಲವಾಗಲು ಪರಗೋಲ ನಿರ್ಮಿಸುವುದು.

d) ಪ್ರತಿಗ್ರಾಮ ಪಂಚಾಯತಿಯಲ್ಲಿ ಪವಿತ್ರ ವನವನ್ನು ಕನಿಷ್ಠ 1 ಎಕರೆ ವಿಸ್ತೀರ್ಣದಲ್ಲಿ ಹಾಗೂ ಗರಿಷ್ಠ ಸ್ಥಳೀಯ ಜಮೀನಿನ ಲಭ್ಯತೆ ಆಧಾರಿಸಿ25 ಎಕರೆವರೆಗೆ ಗುರುತಿಸಿ ಜಮೀನನ್ನು ಜಲಾನಯನ ಮಾದರಿಯಲ್ಲಿ ಅಭಿವೃದ್ಧಿ ಪಡಿಸುವುದು.

e) ಜನರಿಗೆ ವಾಯುವಿಹಾರಕ್ಕೆ ಅನುಕೂಲವಾಗಲು ನಡೆದಾಡುವ ದಾರಿಯನ್ನು ನಿರ್ಮಿಸುವುದು.

f) ವನದಲ್ಲಿ ವಿಸ್ತೀರ್ಣಕ್ಕೆತಕ್ಕಂತೆ ಸ್ಥಳೀಯ ಜಿಲ್ಲಾ ಭೂ ವಿಜ್ಞಾನಿಗಳ ಸಲಹೆಯಂತೆ ಸ್ಥಳ ಗುರುತಿಸಿ ಕೆರೆ/ಹೊಂಡವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು.

g) ವನದ ಸುತ್ತಲು ತಂತಿ ಬೇಲಿ ಅಳವಡಿಸುವುದು ಮತ್ತು ಪ್ರಕೃತಿಗೆ ಒಗ್ಗುವ ಗೇಟ್ ಅಳವಡಿಸಿಕೊಳ್ಳುವುದು.

h) ಸ್ಥಳೀಯ ಹಿರಿಯ ನಾಗರೀಕರು ಹಾಗೂ ನಾಟಿ ವೈದ್ಯರ ಸಲಹೆಯ ಮೇರೆಗೆ ಇತರೆ ಅವಶ್ಯಕ ಸಸ್ಯಗಳನ್ನು ಅಳವಡಿಸಿಕೊಳ್ಳಬಹುದು.

i) ಪವಿತ್ರ ವನದ ಸಂಪೂರ್ಣ ಸಂರಕ್ಷಣೆಯನ್ನು ಆಯಾ ಗ್ರಾಮ ಪಂಚಾಯತಿಗಳೇ ನಿರ್ವಹಿಸತಕ್ಕದ್ದು.

2022-23ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅನುಷ್ಠಾನ ಇಲಾಖೆಗಳು ಮೇಲ್ಕಂಡ ಅಂಶಗಳನ್ನು ಅಳವಡಿಸಿಕೊಂಡು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅನುಮೋದಿತ ದರಪಟ್ಟಿ ಅನುಸಾರ ಅಂದಾಜು ಪಟ್ಟಿ ತಯಾರಿಸಿ ಮಾರ್ಗಸೂಚಿಯನುಸಾರ ಗ್ರಾಮ ಪಂಚಾಯತಿಯಲ್ಲಿ ಅನುಮೋದಿಸಿಕೊಂಡು ತಾಂತ್ರಿಕ ಮತ್ತು ಆರ್ಥಿಕ ಪ್ರತ್ಯಾಧಿಕಾರದ ಅನ್ವಯ ಮಂಜೂರಾತಿಯನ್ನು ಪಡೆದುಕೊಂಡು ಅನುಷ್ಠಾನಗೊಳಿಸುವುದು.

ತಮ್ಮ ವಿಶ್ವಾಸಿ,

22/10/22

ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
4. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಜಂಟಿ ನಿರ್ದೇಶಕರು, (ತಾಂತ್ರಿಕ/ಆಡಳಿತ/ತೋಟಗಾರಿಕೆ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
8. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ

ಅನುಬಂಧ-1

## Rashi Vana or Zodiac garden

| Sl.No | Name of the Rassi/Zodiac name | Common name of the tree | Botanical name | Family |
|---|---|---|---|---|
| 1 | Mesha / Aries | Rakta chandanam | *Pterocarpus santalinus* | Fabaceae |
| 2 | Vrishabha / Taurus | Aedakulapala / Saptaparni | *Alstonia scholaris* | Apocynaceae |
| 3 | Midhuna / Gemini | a. Jack fruit<br>b. Ankudu | a. *Artocarpus heterophyllus*<br>b. *Wrightia tinctoria* | a. Moraceae<br>b. Apocynaceae |
| 4 | Karkataka / Cancer | Flame of the forest | *Butea monosperma* | Fabaceae |
| 5 | Simha / Leo | a. Padaari<br>b. Chinese Jujube<br>c. Regu / Indian Jujube | a. *Stereospermum colais / Stereospermum tetragonum*<br>b. *Ziziphus jujube*<br>c. *Ziziphus mauritiana* | a. Bignoniaceae<br>b. Rhamnaceae<br>c. Rhamnaceae |
| 6 | Kanya / Virgo | Mango/ Mamidi | *Mangifera indica* | Anacardiaceae |
| 7 | Tula / Libra | Bakul / Bogada | *Mimusops elengi* | Sapotaceae |

## ಅನುಬಂಧ-2

## Navagraha vana

| Sl.No | Name of the planet/Graha | Common name of the tree | Botanical name | Family |
|---|---|---|---|---|
| 1 | Budha / Mercury | Uttareni | *Achyranthes aspera* | Amaranthaceae |
| 2 | Sukra / Venus | Athi / Medi / Udumbara | *Ficus glomerata / Ficus racemosa* | Moraceae |
| 3 | Chandra / Moon | Moduga / Flame of the Forest | *Butea monosperma* | Fabaceae |
| 4 | Guru / Jupiter | Aswaddha / Pipal | *Ficus religiosa* | Poaceae |
| 5 | Kuja / Mars / Mangala | Kachu / Sandra / Chandra/ Khair | *Acacia catechu* | Mimosaceae |
| 6 | Surya / Sun | Swetarka / Tella Jilledu | *Calotropis procera/ Calotropis gigantea* | Apocynaceae |
| 7 | Kethu / South Lunar Node | Dharba Gaddi | *Imperata cylindrica* | Poaceae |
| 8 | Sani / Saturn | Jammi / Samee | *Prosopis cineraria / Prosopis spicigera* | Fabaceae |

ಅನುಬಂಧ-3

## Nakshatra vana

| Sl.No | Name of Nakshatra/Star | Common name of the tree | Botanical name | Family |
|---|---|---|---|---|
| 1 | Ashwini | a. Mushidi/Vishamusthi<br>b. Cashewnut | a. *Strychnos nux-vomica*<br>b. *Anacardium occidentale* | a. Loganiaceae<br>b. Anacardiaceae |
| 2 | Bharani | Amla / Indian Gooseberry | *Phyllanthus emblica* | Euphorbiaceae |
| 3 | Krittika | Athi / Medi | *Ficus glomerata / Ficus racemosa* | Moraceae |
| 4 | Rohini | Jamun | *Eugenia jambolana / Syzygium cuminii* | Myrtaceae |
| 5 | Mrigashira | Kachu / Khair | *Acacia catechu* | Mimosaceae |
| 6 | Aarudra | Tumiki chettu / Beedi aaku | *Diospyros melanoxylon* | Ebenaceae |
| 7 | Punarvasu | Golden Bamboo / Painted Bamboo | *Bambusa vulgaris 'Vittata'* | Poaceae |
| 8 | Pushyami | Aswaddha / Pipal | *Ficus religiosa* | Poaceae |
| 9 | Aashlesha | Ponna / Laurel wood | *Calophyllum inophyllum* | Clusiaceae |
| 10 | Magha | Banyan tree | *Ficus benghalensis* | Moraceae |
| 11 | Pubba | Flame of the Forest | *Butea monosperma* | Fabaceae |
| 12 | Uttara | a. Karaveera / Ganneru<br>b. Juvvi | a. *Nerium indicum*<br>b. *Ficus virens* | a. Apocynaceae<br>b. Moraceae |
| 13 | Hasta | a. Tella tumma<br>b. Hog plum<br>c. Jaji / Sanna Jaji | a. *Acacia leucophloea*<br>b. *Spondias pinnata*<br>c. *Jasminum grandiflorum* | a. Mimosaceae<br>b. Anacardiaceae<br>c. Oleaceae |
| 14 | Chitra / Chitta | Beal / Bilwa | *Aegle marmelos* | Rutaceae |
| 15 | Swathi | Arjun | *Terminalia arjuna* | Combretaceae |
| 16 | Visakha | a. Wood apple<br>b. Naga Keshar | a. *Feronia elephantum / Limonia acidissima*<br>b. *Mesua ferrea* | a. Rutaceae<br>b. Caryophyllaceae |
| 17 | Anuradha | a. Bogada<br>b. Naagkeshar | a. *Mimusops elengi*<br>b. *Mesua ferrea* | a. Sapotaceae<br>b. Caryophyllaceae |
| 18 | Jyeshtha | a. Devadaru<br>b. Pine<br>c. Barnika<br>d. Local Devadaru / Red cedar | a. *Cedrus deodara*<br>b. *Pinus roxburghii*<br>c. *Streblus asper*<br>d. *Erythroxylum monogynum* | a. Pinaceae<br>b. Pinaceae<br>c. Moraceae<br>d. Linaceae |
| 19 | Moola | a. Sambrani<br>b. Sal / Guggilam<br>c. Anjan / Aepi | a. *Boswellia serrata*<br>b. *Shorea talura / Shorea roxburghii*<br>c. *Hardwickia binata* | a. Burseraceae<br>b. Dipterocarpaceae<br>c. Fabaceae |
| 20 | Purvashada | a. Jammi / Samee<br>b. Ashoka | a. *Prosopis cineraria/ Prosopis spicigera*<br>b. *Saraca asoca* | a. Fabaceae<br>b. Fabaceae |

| | | | | |
|---|---|---|---|---|
| 21 | Uttarashada | Jack Fruit | *Artocarpus heterophyllus* | Moraceae |
| 22 | Sravanam | Swetarka / Tella Jilledu | *Calotropis procera / Calotropis gigantea* | Asclepiadaceae / Apocynaceae |
| 23 | Dhanishta | a. Drumstick<br>b. Anasandra | a. *Moringa oleifera*<br>b. *Acacia ferruginea* | a. Moringaceae<br>b. Fabaceae |
| 24 | Satabisha | Kadambam | *Anthocephalus cadamba / Neolamarckia cadamba* | Rubiaceae |
| 25 | Purvabhadra | a. Neem<br>b. Nalla maddi | a. *Azadirachta indica*<br>b. *Terminalia elliptica / Terminalia tomentosa* | a. Meliaceae<br>b. Combretaceae |
| 26 | Uttarabhadra | a. Neem<br>b. Mango | a. *Azadirachta indica*<br>b. *Mangifera indica* | a. Meliaceae<br>b. Anacardiaceae |
| 27 | Revathi | Ippa / Mohua | *Madhuca longifolia / Madhuca indica* | Sapotaceae |

ಅನುಬಂಧ-4

## Saptarishi vana - Garden with plants for 7 Indian Great 'Sages'

| Sl.No | Name of Rishi/Sage | Common name of the tree | Botanical name | Family |
|---|---|---|---|---|
| 1 | Vasistha | a. Anasandra<br>b. Tulasi | a. *Acacia ferruginea*<br>b. *Ocimum sanctum / Ocimum tenuiflorum* | a. Mimosaceae<br>b. Lamiaceae |
| 2 | Athri | a. Avisi<br>b. Kaluva | a. *Sesbania grandiflora*<br>b. *Nymphaea nouchali* | a. Fabaceae<br>b. Nymphaeaceae |
| 3 | Gouthama | a. Ummetta<br>b.Sanna Jaji | a. *Datura metel*<br>b. *Jasminum pubescens / Jasminum multiflorum* | a. Solanaceae<br>b. Oleaceae |
| 4 | Kashyapa | Tulasi | *Ocimum sanctum / Ocimum tenuiflorum* | Lamiaceae |
| 5 | Bharadwaja | a. Uttareni<br>b. Betel Nut | a. *Achyranthes aspera*<br>b. *Areca catechu* | a. Amaranthaceae<br>b. Arecaceae |
| 6 | Jamadagni | a. Garika<br>b. Wild Jasmine | a. *Cynodon dactylon*<br>b. *Jasminum angustifolium* | a. Poaceae<br>b. Oleaceae |
| 7 | Vishwamithra | a. Bilva<br>b. Nannari | a. *Aegle marmelos*<br>b. *Hemidesmus indicus* | a. Rutaceae<br>b. Apocynaceae |

## ಅನುಬಂಧ-5

## ಔಷಧಿ ಗಿಡಗಳು

| Sl. No. | Name | Part Used | Uses | ಉಪಯೋಗಗಳು |
|---|---|---|---|---|
| 1 | ಟಿಂಬರ್ ಗಿಡ a (Tincture plant) *Hemigraphis colorata* | Leaves | Leaves are used to antiseptic | ಎಲೆಗಳನ್ನು ಗಾಯ ಮಾಯಿಸಲು ಬಳಸಲಾಗುತ್ತದೆ. |
| 2 | ಕಾಡು ದವನ (Kadu davana) *Artemisa vulgaris* | Fresh Herb | Fresh herb is used in fever rheumatic pains and in skin diseases | ಇದರ ಎಲೆಗಳನ್ನು ವಾತಾ. ಕಫ ಮತ್ತು ಚರ್ಮ ದೋಷಗಳಿಗೆ ಬಳಸಲಾಗುತ್ತಿದೆ. |
| 3 | ಮಾಚಿ ಪತ್ರೆ (Maachipatre) *Artemisia pallens* | Fresh Herb | Fresh herb is used in cough, cold, fever and as insect repellant | ಇದರ ಎಲೆಗಳನ್ನು ಜ್ವರದಲ್ಲಿ, ಸಂಧಿವಾತದ ನೋವುಗಳಲ್ಲಿ ಮತ್ತು ಧರ್ಮ ದೋಷಗಳಲ್ಲಿ ಬಳಸಲಾಗುತ್ತಿದೆ. |
| 4 | ಶ್ರೀ ತುಳಸಿ (Shritulasi) Ocimum sanctum | Fresh Herb | Fresh herb is used in cough, cold, fever and as insect repellant | ಇದರ ಎಲೆಗಳನ್ನು ಕೆಮ್ಮು, ನೆಗಡಿ. ಜ್ವರಗಳಲ್ಲಿ ಮತ್ತು ಕೀಟ ವಿಕರ್ಷಕವಾಗಿ ಬಳಸಲಾಗುತ್ತಿದೆ. |
| 5 | ಕೃಷ್ಣ ತುಳಸಿ (Krishnathulasi) *Ocimum sanctum* | Fresh Herb | Fresh herb is used in cough, cold, fever and as insect repellant | ಇದರ ಎಲೆಗಳನ್ನು ಕೆಮ್ಮು, ನೆಗಡಿ. ಜ್ವರಗಳಲ್ಲಿ ಮತ್ತು ಕೀಟ ವಿಕರ್ಷಕವಾಗಿ ಬಳಸಲಾಗುತ್ತಿದೆ. |
| 6 | ಕಾಮಕಸ್ತೂರಿ (Sweet basil) *Ocimum sanctum* | Fresh Herb | Fresh herb is used in culinary purpose and also in cosmetics. | ಇದರ ಎಲೆಗಳನ್ನು ಅಡುಗೆಯಲ್ಲಿ ರುಚಿಗೆ ಹಾಗೂ ಸೌಂದರ್ಯವರ್ಧಕಗಳಲ್ಲಿ ಬಳಸಲಾಗುತ್ತಿದೆ. |
| 7 | ಲವಂಗ ತುಳಸಿ (Clove basil) *Ocimum gratissimum* | Fresh Herb | Fresh herd used in vitiated conditions of vata, kapha and skin diseases | ಇದರ ಎಲೆಗಳನ್ನು ಸೌಂದರ್ಯ ವರ್ಧಕಗಳಲ್ಲಿ ಮತ್ತು ಕೀಟ ವಿಕರ್ಷಕವಾಗಿ ಬಳಸಲಾಗುತ್ತಿದೆ. |
| 8 | ಸ್ಪಿಯರ್ ಪುದಿನ (Spear mint) *Mentha spicata* | Fresh Herb | Fresh herd used in flavoring, confectioneries and in cosmetic industries | ಇದರ ಎಲೆಗಳನ್ನು ಅಡುಗೆ ರುಚಿಗೆ, ಬೇಕರಿ ತಿನಿಸುಗಳಲ್ಲಿ ಮತ್ತು ಸೌಂದರ್ಯವರ್ಧಕಗಳಲ್ಲಿ ಬಳಸಲಾಗುತ್ತಿದೆ. |
| 9 | ಬಜೆ (Sweet flag) *Acorus calamus* | Rhizomes | Rhizomes are used in vitiated conditions of vata, kapha and epilepsy | ಇದರ ಬೇರುಗಡ್ಡೆಯನ್ನು ವಾತ, ಕಫ ಹಾಗೂ ಮೂರ್ಛೆ ರೋಗಗಳಲ್ಲಿ ಬಳಸಲಾಗುತ್ತಿದೆ. |
| 10 | ಒಂದೆಲಗ (Mandukaparni) *Centella asistica* | Leaves | Leaves are used to enhance memory power and also used in epilepsy | ಇದರ ಎಲೆಗಳನ್ನು ನೆನಪಿನ ಶಕ್ತಿ ಹೆಚ್ಚಿಸಲು ಮತ್ತು ಅಪಸ್ಮರ ನಿವಾರಣೆಯಲ್ಲಿ ಬಳಸಲಾಗುತ್ತಿದೆ. |
| 11 | ಬ್ರಾಹ್ಮಿ (Brahmi) *Bacopa monnierii* | Whole plant | Whole plant is used in nerval disorders and also as an hair tonic | ಪೂರ್ತಿ ಗಿಡವನ್ನು ನರದೌರ್ಬಲ್ಯಗಳಲ್ಲಿ ಮತ್ತು ಕೂದಲುಗಳ ರಕ್ಷಣೆಗೆ ಬಳಸಲಾಗುತ್ತಿದೆ. |
| 12 | ಹಿಪ್ಪಲಿ (Long pepper) *Pipper longum* | Fruits and roots | Fruits and roots are used for cough, cold and as an hair tonic | ಇದರ ಕಾಯಿ ಮತ್ತು ಬೇರುಗಳನ್ನು ಕೆಮ್ಮು, ನೆಗಡಿ ಹಾಗೂ ಯಕೃತಿನ ತೊಂದರೆಗಳಲ್ಲಿ ಬಳಸಲಾಗುತ್ತಿದೆ. |
| 13 | ಶಂಕರಪುಷ್ಪ *(Convolvuslus* | Roots | Roots are useful in eye | ಈ ಗಿಡದ ಬೇರುಗಳು ಕಣ್ಣು ಮತ್ತು |

| | | | | |
|---|---|---|---|---|
| | *pulricaulis)* | leaves and seeds | disorders and skin diseases; seeds are useful in cough. | ಚರ್ಮರೋಗಗಳಲ್ಲಿ ಹಾಗೂ ಬೀಜಗಳನ್ನು ಕೆಮ್ಮಿನ ನಿವಾರಣೆಗೆ ಬಳಸಲಾಗುತ್ತಿದೆ. |
| 14 | ಲೋಳಸರ (Aloe) *Aloe vera* | Leaf mucilage | Leaf mucilage is used in skin disease, wounds and for enhancing complexion | ಇದರ ಎಲೆಯ ಲೋಳೆಯನ್ನು ಚರ್ಮ ರೋಗಗಳಲ್ಲಿ, ಗಾಯಗಳಲ್ಲಿ ಸೌಂದರ್ಯವರ್ಧಕಗಳಲ್ಲಿ ಬಳಸಲಾಗುತ್ತಿದೆ. |
| 15 | ಮಧುವಂತ (Stevia) *Stevia rebaudainan* | Leaves | Leaves are used as calorie free sweetener for diabetics | ಇದರ ಎಲೆಗಳನ್ನು ಶಕ್ತಿ ತಹಿತ ಸಿಹಿಕಾರಕವಾಗಿ ಮಧುಮೇಹ ರೋಗಿಗಳು ಬಳಸಬಹುದಾಗಿದೆ. |
| 16 | ಮಧುನಾಶಿನಿ (Madhunashiṇi) *Gymnema sylvestre* | Leaves | Leaves are used to reduce sugar and liver damages | ಇದರ ಎಲೆಗಳನ್ನು ರಕ್ತದಲ್ಲಿನ ಸಕ್ಕರೆ ಅಂಶವನ್ನು ಕಡಿಮೆಮಾಡಲು ಮತ್ತು ಯಕೃತಿನ ತೊಂದರೆಗಳಲ್ಲಿ ಬಳಸಲಾಗುತ್ತಿದೆ. |
| 17 | ನೆಲನಲ್ಲಿ (Phyllantus) *Phyllanthus amarus* | Whole plant | Whole plant is used to cure jaundice | ಈ ಗಿಡಗಳನ್ನು ಅರಿಶಿನ ಕಾಮಾಲೆ ಖಾಯಿಲೆಗೆ ಬಳಸಲಾಗುತ್ತದೆ. |
| 18 | ಮಾಕಂದೀ ಬೇರು (Coleus) *Coleus forskohlii* | Roots and Leaves | Roots reduce blood pressure and also cardio tonic | ಇದರ ಬೇರುಗಳನ್ನು ರಕ್ತದೊತ್ತಡ ಮತ್ತು ಹೃದಯ ದೌರ್ಬಲ್ಯ ನಿವಾರಣೆಗೆ ಬಳಸಲಾಗುತ್ತಿದೆ. |
| 19 | ಅಡುಸೋಗೆ (Vasaka) *Adhathoda vasica* | Leaves | Leaves and used in bronchitis and bronchial asthma | ಇದರ ಎಲೆಗಳನ್ನು ಕೆಮ್ಮು, ದಮ್ಮು ಮತ್ತು ಅಸ್ತಮ ಕಾಯಿಲೆಗಳಲ್ಲಿ ಬಳಸಲಾಗುತ್ತಿದೆ. |
| 20 | ಅಮೃತಬಳ್ಳಿ (Tinospora) *Tinospora cordifolia* | Steam and Leaves | Stem is used as general tonic for blood pressure and leaves are used for diabetes | ಈ ಗಿಡದ ಕಾಂಡವನ್ನು ರಕ್ತದೊತ್ತಡಗಳಲ್ಲಿ ಹಾಗೂ ಇದರ ಎಲೆಗಳನ್ನು ಮಧುಮೇಹ ರೋಗಗಳಲ್ಲಿ ಬಳಸಲಾಗುತ್ತಿದೆ. |
| 21 | ಮಂಗರವಳ್ಳಿ (Adjode) *Cisus quadrangularis* | Whole plant | Whole plant is used for bone setting and the stem part is edible | ಸಂಪೂರ್ಣ ಗಿಡಗಳನ್ನು ಮುರಿದ ಮೂಳೆಯನ್ನು ಜೋಡಿಸಲು ಬಳಸಲಾಗುತ್ತದೆ. ಕಾಂಡ ಭಾಗವನ್ನು ಅಡುಗೆಯಲ್ಲಿ ಬಳಸಲಾಗುತ್ತದೆ. |
| 22 | ನಾಗದಾಳಿ (Garden rue) *Ruta graveolens* | Leaves | Leaves are used in cough and cold, leaf oil is used for rheumatic pains. | ಇದರ ಎಲೆಗಳನ್ನು ಕೆಮ್ಮು ಮತ್ತು ನೆಗಡಿಗಳಲ್ಲಿ ಹಾಗೂ ಇದರ ಎಲೆಯ ಎಣ್ಣೆಯನ್ನು ಸಂಧಿವಾತದ ನೋವುಗಳಿಗೆ ಬಳಸಲಾಗುತ್ತದೆ. |
| 23 | ಬಸಳೆ (Indain spinach) | Leaves | Leaves are used in constipation, diuretic and leaves are rich I n vit'B | ಇದರ ಎಲೆಗಳನ್ನು ಮಲಬದ್ಧತೆಯಲ್ಲಿ, ಮೂತ್ರಕರವಾಗಿ ಅಲ್ಲದೆ ಇದರ ಎಲೆಗಳು 'ಬಿ; ಜೀವಸತ್ವವನ್ನು ಹೊಂದಿದೆ. |
| 24 | ರಾಸ್ನ (Rasna) | Rhizome | Rhizomes are used in joint pain, gastralgia, diarrhea and malarial fever | ಇದರ ಬೇರುಗಡ್ಡೆಗಳನ್ನು ಸಂಧಿವಾತ, ವಾಯುದೋಷಗಳಲ್ಲಿ ಮಲೇರಿಯಾ ಜ್ವರ ಮತ್ತು ಅತಿಸಾರ ಭೇದಿ ನಿವಾರಣೆಗೆ ಬಳಸಲಾಗುತ್ತದೆ. |
| 25 | ಹೊನಗೊನೆ ಸೊಪ್ಪು (Alternathera *Alternanthera sessilis)* | Whole plant | Whole plant is used in vitiated conditions of kapha and pitta and eye diseases | ಸಂಪೂರ್ಣ ಗಿಡವನ್ನು ಕಫ ಪಿತ್ತ ದೋಷಗಳಲ್ಲಿ ಹಾಗೂ ಕಣ್ಣಿನ ದೋಷಗಳಲ್ಲಿ ಬಳಸಲಾಗುತ್ತದೆ. |
| 26 | ಪುನರ್ನವ (Hogweed) | Whole plant | Whole plant is used in ophthalmia, cardiac disorders and anaemia | ಪೂರ್ತಿ ಗಿಡವನ್ನು ಕಣ್ಣಿನ ದೋಷಗಳಲ್ಲಿ ಹೃದಯ ದೌರ್ಬಲ್ಯಗಲ್ಲಿ ಹಾಗೂ ರಕ್ತ ದೋಷಗಳಲ್ಲಿ ಬಳಸಲಾಗುತ್ತದೆ. |
| 27 | ಇನ್ಸುಲಿನ್ ಗಿಡ (Insulin plant) | Leaves | Leaves are used in enhancing insulin secretion | ಇದರ ಎಲೆಗಳನ್ನು ಇನ್ಸುಲಿನ್ ಉತ್ಪಾದನೆಯನ್ನು ಹೆಚ್ಚಿಸಲು ಬಳಸುತ್ತಾರೆ. |

| | | | | |
|---|---|---|---|---|
| 28 | ಬಿಳಿ ಗರುಗ (Eclipta) *Eclipta albha* | Whole plant | Whole plant is used for the treatment of jaundice, blackeing and strenghteinign of hairs | ಪೂರ್ತಿ ಗಿಡವನ್ನು ಕಾಮಾಲೆ ಖಾಯಿಲೆಯಲ್ಲಿ ಕೂದಲುಗಳಿಗೆ ಕಪ್ಪು ಬಣ್ಣವನ್ನು ಕೊಡಲು ಹಾಗೂ ಕೂದಲುಗಳ ಉತ್ತಮ ಬೆಳವಣಿಗೆಗೆ ಬಳಸಲಾಗುತ್ತದೆ. |
| 29 | ವನಮುಗಳಿ (Vanamuguli) *Spilanthes acmella* | Flowering heads | Flowering heads are used to relieve tooth ache and stammering paralysis | ಇದರ ಹೂವುಗಳನ್ನು ಹಲ್ಲು ನೋವು ನಿವಾರಣೆಗೆ ಮತ್ತು ತೊದಲು ನಿವಾರಣೆಗೆ ಬಳಸಲಾಗುತ್ತಿದೆ. |
| 30 | ದೊಡ್ಡಪತ್ರೆ (Indian borage) Coleus ambonicus | Leaves | Leaves are useful in cough, hiccough and allergy | ಇದರ ಎಲೆಗಳನ್ನು ಕೆಮ್ಮು, ಬಿಕ್ಕಳಿಕೆ ಮತ್ತು ಅಲರ್ಜಿಗಳಲ್ಲಿ ಬಳಸಲಾಗುತ್ತದೆ. |
| 31 | ಚಕ್ರಮುನಿ (Multi vitamin plant) *Sourpous androgynou* | Leaves | Leaves are rich in vitamin | ಈ ಗಿಡದ ಎಲೆಗಳು ಸಮೃದ್ಧ ಜೀವಸತ್ವ 'ಬಿ, ಸಿ ಮತ್ತು ಇ'ಗಳನ್ನು ಹೊಂದಿದೆ. |

# ಅನುಬಂಧ-6

ಜಿಲ್ಲೆಯ ಹೆಸರು:

| ಕ್ರಮ ಸಂಖ್ಯೆ | ತಾಲ್ಲೂಕು | ಗ್ರಾಮ ಪಂಚಾಯತಿಯ ಹೆಸರು | ಗ್ರಾಮದ ಹೆಸರು | ಪವಿತ್ರ ವನಗಳ ಸಂಖ್ಯೆ | ವಿಸ್ತೀರ್ಣ (ಎಕರೆಗಳಲ್ಲಿ) | ಸರ್ವೇ ನಂ. | ಷರಾ |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |

ಸಹಿ/-

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತಿ ------------